C.R.P.67

Form No.4 (Civil)
Deposition Sheets
(R.P.No.57)

**1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,**
**ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.**

ಸ್ಪೆಷಲ್ ಸಿ ಸಂಖ್ಯೆಃ **49/2020**

ಪ್ರಾಸಾ. **04** ಚಾಸಾ. **07**

| | | |
|---|---|---|
| ಸಾಕ್ಷಿದಾರರ ಹೆಸರು | : | ಗಂಗಾಧರ್. |
| ತಂದೆಯ ಹೆಸರು | : | ನರಸೀಯಪ್ಪ. |
| ವಯಸ್ಸು | : | 43 ವರ್ಷಗಳು |
| ಉದ್ಯೋಗ | : | ವ್ಯವಸಾಯ |
| ವಾಸ | : | ಉಜ್ಜನಿ, ದೊಡ್ಡಬಳ್ಳಾಪುರ ತಾಲ್ಲೂಕು. |

ಪ್ರಮಾಣ ವಚನ ಬೋಧಿಸಿದ ದಿನಾಂಕಃ **20.11.2024.**

ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ

ಈಗ ತೋರಿಸಿದ ಸ್ಥಳ ಪಂಚನಾಮೆಯಲ್ಲಿ ನನ್ನ ಸಹಿ ಇರುತ್ತದೆ. ಸದರಿ ಸ್ಥಳ ಪಂಚನಾಮೆಯನ್ನು ನಿ.ಪಿ-**26** ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿ.ಪಿ-**26(ಎ)** ಎಂದು ಗುರುತಿಸಲಾಯಿತು. ಸುಮಾರು ವರ್ಷಗಳ ಹಿಂದೆ ಗುಟ್ಟೆ ನರಸಿಂಹಸ್ವಾಮಿ ದೇವಸ್ಥಾನದ ಬಳಿ ಸದರಿ ದಾಖಲೆಗೆ ಸಹಿ ಮಾಡಿರುತ್ತೇನೆ. ನಾನು ಯಾವ ಸಮಯದಲ್ಲಿ ಸದರಿ ದಾಖಲೆಗೆ ಸಹಿ ಮಾಡಿರುತ್ತೇನೆ ಎಂದು ನನಗೆ ಗೊತ್ತಿಲ್ಲ. ನಾನು ಕೆಲಸ ಮಾಡಿಕೊಂಡಿದ್ದೆ, ಪೋಲೀಸ್ ಇನ್ಸ್ ಪೆಕ್ಟರ್ ರವರು ನನ್ನ ಬಳಿ ಬಂದು ಒಂದು ಮಹಜರ್ ದಾಖಲೆಗೆ ನೀನು ಪಂಚರಾಗಿ ಸಹಿ ಮಾಡಬೇಕೆಂದು ನನ್ನನ್ನು ಸದರಿ ಸ್ಥಳಕ್ಕೆ ಕರೆದುಕೊಂಡು ಹೋದರು. ನಿ.ಪಿ-26 ರಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತಿಲ್ಲ. ಪೋಲೀಸರು ಸದರಿ ದಾಖಲೆಗೆ ಯಾವ ವಿಚಾರವಾಗಿ ನನ್ನ ಸಹಿ ಪಡೆದುಕೊಂಡರು ಎಂದು ನನಗೆ ಗೊತ್ತಿಲ್ಲ.

2. ಈಗ ತೋರಿಸಿದ 4 ಫೋಟೋಗಳನ್ನು ಗುಟ್ಟೆ ನರಸಿಂಹಸ್ವಾಮಿ ದೇವಸ್ಥಾನದ ಬಳಿ ಪೋಲೀಸರು ತೆಗೆದಿರುತ್ತಾರೆ. ಸಾಕ್ಷಿ ಗುರುತಿಸಿದ **4** ಫೋಟೋಗಳನ್ನು ನಿ**.**ಪಿ**-27** ರಿಂದ ನಿ**.**ಪಿ**-30** ಎಂದು ಗುರುತಿಸಲಾಯಿತು. ನಿ.ಪಿ-28 ಹಾಗೂ ನಿ.ಪಿ-29 ಫೋಟೋಗಳಲ್ಲಿ ನಾನು ಇರುತ್ತೇನೆ. ಫೋಟೋಗಳಲ್ಲಿ ಇರುವ ಉಳಿದ ವ್ಯಕ್ತಿಗಳು ಯಾರು ಎಂದು ನನಗೆ ಗೊತ್ತಿಲ್ಲ.

**(**ಈ ಹಂತದಲ್ಲಿ ಮಾನ್ಯ ಸರ್ಕಾರಿ ಅಭಿಯೋಜಕರು ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದಾರೆ**.** ಕಡತದಲ್ಲಿರುವ ಅಂಶಗಳನ್ನು ಪರಿಗಣಿಸಲಾಗಿ ಸಾಕ್ಷಿದಾರರು ಅಭಿಯೋಜನೆಯ ಕೇಸಿಗೆ ವಿರುದ್ಧವಾಗಿ ಸಾಕ್ಷಿ ನುಡಿಯುತ್ತಿರುವುದು ಕಂಡುಬರುತ್ತದೆ**.** ಈ ಕಾರಣದಿಂದ ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಅವರನ್ನು ಪಾಟೀ ಸವಾಲಿಗೆ ಒಳಪಡಿಸಲು ಮಾನ್ಯ ಸರ್ಕಾರಿ ಅಭಿಯೋಜಕರಿಗೆ ಅನುಮತಿ ನೀಡಲಾಯಿತು**)**

<u>ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ</u>

3. ದಿನಾಂಕ 20.06.2018 ರಂದು ಪೋಲೀಸ್ ಇನ್ಸ್ ಪೆಕ್ಟರ್ ಜಿ. ಸಿದ್ದರಾಜು ರವರು ಈ ಕೇಸಿನ ತನಿಖೆ ಸಲುವಾಗಿ ಉಜ್ಜನಿ ಗ್ರಾಮಕ್ಕೆ ಬಂದಿದ್ದು ಆಗ ಪೋಲೀಸ್ ಇನ್ಸ್ ಪೆಕ್ಟರ್ ರವರು ನನ್ನನ್ನು ಹಾಗೂ ಚಾ.ಸಾ.8 ಗೋಪಿ ರವರನ್ನು ಕರೆಸಿ ಈ ಕೇಸಿನ ವಿಚಾರವನ್ನು ತಿಳಿಸಿ ತಮ್ಮ ವಶದಲ್ಲಿದ್ದ 6 ನೇ ಆರೋಪಿಯನ್ನು ನಮಗೆ ತೋರಿಸಿ, ಆ 6 ನೇ ಆರೋಪಿ ಬೇರೆ ಆರೋಪಿಗಳೊಂದಿಗೆ ಕಾಡುಹಂದಿ ಭೇಟೆಗಾಗಿ ಗುಟ್ಟೆ ನರಸಿಂಹಸ್ವಾಮಿ ದೇವಸ್ಥಾನದ ಸಮುದಾಯ ಭವನದ ಹಿಂಭಾಗದಲ್ಲಿ ಗೂಟಗಳನ್ನು ನೆಟ್ಟಿ ಅದಕ್ಕೆ ವಿದ್ಯುತ್ ತಂತಿಯನ್ನು ಸುತ್ತಿ ವಿದ್ಯುತ್ ತಂತಿಯನ್ನು ವಿದ್ಯುತ್ ಕಂಬದ ಲೈನಿಗೆ ಅಳವಡಿಸಿ ರಾತ್ರಿ ಸುಮಾರು 9-00 ಗಂಟೆಯಲ್ಲಿ ವಿದ್ಯುತ್ ನಿಂದ ಪ್ರಾಣ ಹಾನಿಯಾಗುತ್ತದೆ ಎಂದು ಗೊತ್ತಿದ್ದರೂ ಸಹ ವಿದ್ಯುತ್ ಸಂಪರ್ಕವನ್ನು ಅಕ್ರಮವಾಗಿ ಕಲ್ಪಿಸಿದರಿಂದ ರಾತ್ರಿ ಸುಮಾರು 9-15 ಗಂಟೆಯಲ್ಲಿ ಮೃತ ಮರಿಯಣ್ಣ ಅದೇ ಮಾರ್ಗದಲ್ಲಿ ಬಂದಾಗ ವಿದ್ಯುತ್ ತಂತಿ ತಗುಲಿ ಮೃತಪಟ್ಟಿರುತ್ತಾನೆ ಮತ್ತು 6 ನೇ ಆರೋಪಿ ಸದರಿ ಸ್ಥಳವನ್ನು ನಮಗೆ ತೋರಿಸುವುದಾಗಿ ತಿಳಿಸಿರುತ್ತಾನೆ ನಾವು ಸದರಿ ಸ್ಥಳದಲ್ಲಿ ಮಹಜರ್ ಮಾಡುವಾಗ ನೀವು ಪಂಚರಾಗಿರಬೇಕೆಂದು ಕೋರಿಕೊಂಡರು, ಅದಕ್ಕೆ ನಾನು ಒಪ್ಪಿರುತ್ತೇನೆ ಎಂದರೆ ಸರಿಯಲ್ಲ.

4. ನಂತರ ಪೋಲೀಸ್ ಇನ್ಸ್ ಪೆಕ್ಟರ್ ರವರು ನನ್ನ ಹಾಗೂ ಚಾ.ಸಾ.8 ರವರ ಸಮಕ್ಷಮ ನಿ.ಪಿ-26 ರಂತೆ ಮಧ್ಯಾಹ್ನ 3-00 ರಿಂದ 5-00 ಗಂಟೆ ವರೆಗೆ ಮಹಜರ್ ಕ್ರಮ ಜರುಗಿಸಿ ಅದರಲ್ಲಿ ಬರೆದಿರುವ ವಿಚಾರಗಳನ್ನು ನಮಗೆ ತಿಳಿಸಿ ನನ್ನ ಸಹಿ ಪಡೆದುಕೊಂಡರು ಎಂದರೆ ಸರಿಯಲ್ಲ. ಸದರಿ ಸ್ಥಳದಲ್ಲಿ 6 ನೇ

ಆರೋಪಿ ಆರೋಪಿತರು ಗೂಟವನ್ನು ನೆಟ್ಟಿ ತಂತಿಯನ್ನು ಅಳವಡಿಸಿದ ಸ್ಥಳ ಇದೇ ಎಂದು ಪೋಲೀಸರಿಗೆ ತೋರಿಸಿದನು ಎಂದರೆ ಸರಿಯಲ್ಲ. ನಿ.ಪಿ-27 ರಿಂದ ನಿ.ಪಿ-29 ಫೋಟೋಗಳಲ್ಲಿ ಲುಂಗಿಯನ್ನು ಉಟ್ಟಿಕೊಂಡಿರುವ ವ್ಯಕ್ತಿಯೇ 6 ನೇ ಆರೋಪಿ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ನನಗೆ ಎಲ್ಲಾ ವಿಚಾರಗಳು ಗೊತ್ತಿದ್ದರೂ ಮತ್ತು ನಿ.ಪಿ-26 ರಲ್ಲಿ ಬರೆದಿರುವ ವಿಚಾರಗಳನ್ನು ತಿಳಿದುಕೊಂಡು ಸಹಿ ಮಾಡಿದ್ದರೂ ಸಹ ಮತ್ತು ಸ್ಥಳದಲ್ಲಿ 6 ನೇ ಆರೋಪಿಯನ್ನು ನೋಡಿದ್ದರೂ ಸಹ ಈಗ ಆರೋಪಿಗಳಿಗೆ ಅನುಕೂಲ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ ಶ್ರೀಮತಿ ಎಸ್ ಪಿ ಹಾಗೂ ಶ್ರೀ ಪಿ .ವೈ. ಆರ್ ವಕೀಲರಿಂದ - ಆರೋಪಿತರ ಪರವಾಗಿಃ

ಶ್ರೀಮತಿ ಎಸ್‌ಪಿ ಹಾಗೂ ಶ್ರೀ ಪಿ.ವೈ.ಆರ್ ವಕೀಲರು ಹಾಜರಿದ್ದು ತಮ್ಮದು ಪಾಟೀ ಸವಾಲು ಏನೂ ಇಲ್ಲ ಎಂದು ಹೇಳುತ್ತಿದ್ದಾರೆ, ಆದ್ದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರು ವಿಚಾರಣೆ ಇಲ್ಲ.

**(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)**

ಓ. ಹೇ. ಕೇ. ಸ. ಒ.

(ರವೀಂದ್ರ. ಆರ್)
1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.